**Government of Karnataka**
**Deposition Shet (R.P.N.57) Form 4 Criminal**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ಪ್ರಕರಣ ಸಂಖ್ಯೆ | 388/2018 |

ದಿನಾಂಕ 07-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 4 ಫ್ರಾಸಾಃ 5

| | |
|---|---|
| ಹೆಸರು | ಸೂಗಮ್ಮ |
| ಗಂಡನ ಹೆಸರು | ರಂಗಪ್ಪ |
| ವಯಸ್ಸು | 30 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಕೊತ್ತದೊಡ್ಡಿ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಆರೋಪಿ ನಂ.1 ರಿಂದ 3 ರವರ ಪರಿಚಯ ನನಗೆ ಇರುತ್ತದೆ. ಆರೋಪಿ ನಂ.4 ಗೈರು ಹಾಜರಿ ಇರುತ್ತಾರೆ ಅವರನ್ನು ನೋಡಿದರೆ ನಾನು ಗುರುತಿಸುತ್ತೇನೆ. ಚಾಸಾ–1 ನನ್ನ ಅಣ್ಣನಾಗಬೇಕು. ಚಾಸಾ–2 ಮತ್ತು 3 ರವರ ಪರಿಚಯ ನನಗೆ ಇರುವುದಿಲ್ಲ. ಚಾಸಾ–5 ನನ್ನ ತಂಗಿಯಾಗಬೇಕು. ಚಾಸಾ–6 ನನ್ನ ತಮ್ಮನಾಗಬೇಕು. ಚಾಸಾ–7 ರಿಂದ 9 ರವರ ಪರಿಚಯ ನನಗೆ ಇರುವುದಿಲ್ಲ.

ನನ್ನ ಅಣ್ಣ ದುಡಿಯಲು 15 ವರ್ಷಗಳವರೆಗೆ ಬೆಂಗಳೂರಿಗೆ ಹೋಗಿದ್ದನು. 15 ವರ್ಷಗಳಾದ ನಂತರ ಹೊಲ ಮಾಡಬೇಕು ಎಂದು ಆತನು ಊರಿಗೆ ಬಂದಿದ್ದನು. ನಂತರ ನನ್ನ ಅಣ್ಣನು ಪಹಣಿ ಪತ್ರಿಕೆಯನ್ನು ತೆಗೆಯಲು ಬಂದಿದ್ದನು. ಆದರೆ ಸದರಿ ಪಹಣಿ ಪತ್ರಿಕೆಯು ನಮ್ಮ ಹೆಸರಿಗೆ ಬಂದಿರುವುದಿಲ್ಲ ಸದರಿ ಪಹಣಿ ಪತ್ರಿಕೆಯು ಅವರ ಹೆಸರಿನಲ್ಲಿ ಬಂದಿರುತ್ತದೆ. ನಂತರ ನನ್ನ ಅಣ್ಣನು ಪೋಲಿಸ್ ಠಾಣೆಗೆ ಹೋಗಿ ಹೇಳಿರುತ್ತಾನೆ. ನಂತರ ನಮ್ಮ ಹೊಲ ನಮ್ಮದು ಇರುತ್ತದೆ ಎಂದು ನಾವು ಕೇಸು ಮಾಡಿರುತ್ತೇವೆ. ನಮ್ಮ ತಂದೆಯವರ ಹೆಸರಿನಲ್ಲಿ ಇದ್ದ ಜಮೀನು ಇತ್ತು. ಆದರೆ ಪಹಣಿ ಪತ್ರಿಕೆಯು ನಮ್ಮ ತಂದೆಯ ಹೆಸರಿನಲ್ಲಿ ಇರಲಿಲ್ಲ. ನಮ್ಮ ತಂದೆಯವರ ಹೆಸರಿನಲ್ಲಿದ್ದ ಪಹಣಿ ಪತ್ರಿಕೆಯು ಹೇಗೆ ಅವರ ಹೆಸರಿನಲ್ಲಿ ಆಗಿರುತ್ತದೆ. ಪಹಣಿ ಪತ್ರಿಕೆಯಲ್ಲಿ ಆರೋಪಿತರ ಹೆಸರುಗಳು ಬರುತ್ತವೆ. ನಮ್ಮ ಹೊಲದ ಸರ್ವೆ ನಂಬರ್ 12 ಇರುತ್ತದೆ. ಸದರಿ ಜಮೀನು 16 ಎಕರೆ 7 ಗುಂಟೆ ಇರುತ್ತದೆ. ಅವರು ಒಳಗೊಳಗೆ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ.

ಸ.ಸ.ಅ. ರವರು ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ.ಎಂ. ರವರಿಂದ:**

ನನ್ನ ಮದುವೆಯಾಗಿ 17 ರಿಂದ 18 ವರ್ಷಗಳು ಆಗಿರುತ್ತವೆ. ನಾನು ಸಂದೂರ ಸೀಮಾಂತರದಲ್ಲಿ ಇರುತ್ತೇನೆ. ಚಾಸಾ-1 ಮತ್ತು 6 ರವರು ದುಡಿಯಲು ಬೆಂಗಳೂರಿಗೆ ಹೋಗಿದ್ದರು. ನಾನು ಸಹ ದುಡಿಯಲು ಬೆಂಗಳೂರಿಗೆ ಹೋಗಿದ್ದೆ. ನಾನು ಒಂದು ವರ್ಷದವರೆಗೆ ದುಡಿಯಲು ಬೆಂಗಳೂರಿಗೆ ಹೋಗಿದ್ದೆ. ನಾನು, ನನ್ನ ಅಣ್ಣ ತಮ್ಮ ರವರು ಕೂಡಿ ಬೆಂಗಳೂರಿಗೆ ದುಡಿಯಲು ಹೋಗಿದ್ದೆವು ಎಂದು ಪೋಲಿಸರಿಗೆ ಹೇಳಿರುತ್ತೇನೆ.

ನಾನು ಪೋಲಿಸರಿಗೆ ಪೂನಾಕ್ಕೆ ಹೋಗಿದ್ದೆವು ಎಂದು ಹೇಳಿದ್ದೆ. ಆದರೆ ಬೆಂಗಳೂರಿಗೆ ಹೋಗಿದ್ದೆವು ಎಂದು ಹೇಳಿರುವುದಿಲ್ಲ. ಪೂನಾದಲ್ಲಿ 5 ವರ್ಷಗಳವರಗೆ ಇದ್ದೆವು. ನಮ್ಮ ಅಣ್ಣನವರು ಪೂನಾಕ್ಕೆ ಹೋಗಿದ್ದರು. ಎಷ್ಟನೇ ಇಸ್ವಿಯಿಂದ ಎಷ್ಟನೇ ಇಸ್ವಿಯವರೆಗೆ ನಿಮ್ಮ ಅಣ್ಣಂದಿರು ಪೂನಾದಲ್ಲಿದ್ದರು ಎಂದರೆ ಸಾಕ್ಷಿಯು 15 ವರ್ಷಗಳವರೆಗೆ ಇದ್ದರು ಎಂದು ಹೇಳುತ್ತಾರೆ.

ನಮ್ಮ ಜಮೀನನ್ನು ಗೇಣಿಗೆ ಯಾರಿಗೆ ಹಾಕಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ 1 ನೇ ಆರೋಪಿತನನ್ನು ತೋರಿಸಲಾಯಿತು ಅವರನ್ನು ನೋಡಿ ಆತನ ಹೆಸರು ಮೂಕಪ್ಪ ಇರುತ್ತದೆ ಎಂದು ಹೇಳುತ್ತಾರೆ. ನನ್ನ ಅಣ್ಣನವರು ಎಷ್ಟನೇ ಇಸ್ವಿಯಲ್ಲಿ ಮರಳಿ ಬಂದಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಅಣ್ಣನವರು ಊರಿನಲ್ಲಿ ಇದ್ದು ಈಗ 6 ವರ್ಷಗಳು ನಡೆಯುತ್ತಿವೆ.

ನಾನು ಪಹಣಿ ಪತ್ರಿಕೆಯನ್ನು ನೋಡಿರುವುದಿಲ್ಲ ಅದನ್ನು ಚಾಸಾ–1 ಮತ್ತು 6 ರವರು ನೋಡಿರುತ್ತಾರೆ. ಪಹಣಿ ಪತ್ರಿಕೆಯಲ್ಲಿ ಬದಲಾವಣೆ ಆಗಿರುವ ಬಗ್ಗೆ ಚಾಸಾ–1 ಮತ್ತು 6 ರವರು ಹೇಳಿದ್ದ ಮೇರೆಗೆ ನಾನು ಹೇಳುತ್ತಿದ್ದೇನೆ ಎಂದರೆ ಸರಿ. ಆರೋಪಿತರ ಹೆಸರುಗಳು ಪಹಣಿ ಪತ್ರಿಕೆಯಲ್ಲಿ ದಾಖಲಾಗಲು ಯಾವ ಯಾವ ಕಾಗದ ಪತ್ರಗಳು ಸಲ್ಲಿಸಿದ್ದರು ಎಂದು ಅವುಗಳನ್ನು ನಾನು ನೋಡಿರುವುದಿಲ್ಲ. ಚಾಸಾ–1 ಮತ್ತು 6 ರವರು ಸಾಕ್ಷವನ್ನು ನನಗೆ ಹೇಳು ಎಂದು ಹೇಳಿದ ಕಾರಣ ನಾನು ಹೇಳುತ್ತಿದ್ದೇನೆ ಎಂದರೆ ಸರಿ. ನನಗೆ ಏನು ಆಗಿರುತ್ತದೆ ಎಂದು ಸ್ವಂತ ಮಾಹಿತಿ ಇರದೆ ಇದ್ದರು ಸಹ ನಾನು ನನ್ನ ಅಣ್ಣನವರ ಮಾತನ್ನು ಕೇಳಿ ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿ. ನಾನು ನನ್ನ ಅಣ್ಣನವರ ಮಾತನ್ನು ಕೇಳಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಜೆ.ಎಂ.ಎಫ್.ಸಿ., ದೇವದುರ್ಗ

**Government of Karnataka**
**Deposition Shet (R.P.N.57) Form 4 Criminal**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 388/2018 |

ದಿನಾಂಕ 07-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 6 ಫ್ರಾಸಾಃ 6

| | |
|---|---|
| ಹೆಸರು | ರಮೇಶ |
| ತಂದೆಯ ಹೆಸರು | ಬಾಲಪ್ಪ |
| ವಯಸ್ಸು | 30 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಸುಣ್ಣದಕಲ್ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಆರೋಪಿ ನಂ.1 ರಿಂದ 3 ರವರ ಪರಿಚಯ ನನಗೆ ಇರುತ್ತದೆ. ಆರೋಪಿ ನಂ.4 ಗೈರು ಹಾಜರಿ ಇರುತ್ತಾರೆ ಅವರನ್ನು ನೋಡಿದರೆ ನಾನು ಗುರುತಿಸುತ್ತೇನೆ. 1 ನೇ ಆರೋಪಿತನಿಗೆ ಹನುಮಂತರಾಯ ಅಲಿಯಾಸ್ ಮೂಕಪ್ಪ ಅಂತಾ ಕರೆಯುತ್ತಾರೆ. 2 ನೇ ಆರೋಪಿತರ ಹೆಸರು ಲಕ್ಷ್ಮಿ ಇರುತ್ತದೆ. 3 ನೇ ಆರೋಪಿತನ ಹೆಸರು ಬಾಲಗೌಡ ಅಲಿಯಾಸ್ ದೇವಪ್ಪ ಇರುತ್ತದೆ. 4 ನೇ ಆರೋಪಿತನ ಹೆಸರು ಮಲ್ಲಿಕಾರ್ಜುನ ಇರುತ್ತದೆ. ಚಾಸಾ–1 ನನ್ನ ಅಣ್ಣನಾಗಬೇಕು. ಚಾಸಾ–2 ಮತ್ತು 3 ರವರು ನನ್ನ ಅಣ್ಣತಮ್ಮರಾಗಬೇಕು.

ಚಾಸಾ-4 ಮತ್ತು 5 ನನ್ನ ಅಕ್ಕಂದಿರಾಗಬೇಕು. ಚಾಸಾ-7 ರಿಂದ 9 ರವರ ಪರಿಚಯ ನನಗೆ ಇರುವುದಿಲ್ಲ.

ನಾವು ಪೂನಾಕ್ಕೆ ಮತ್ತು ಬೆಂಗಳೂರಿಗೆ ಸೇರಿ 15 ವರ್ಷಗಳವರೆಗೆ ಹೋಗಿದ್ದೆವು. 15 ವರ್ಷಗಳಾದ ನಂತರ ನಾವು ನಮ್ಮ ಊರಿಗೆ ಬಂದಿದ್ದೆವು. ನಮ್ಮ ತಂದೆಯ ಹೊಲವನ್ನು ನಮ್ಮ ಹೆಸರಿಗೆ ಮಾಡಿಕೊಳ್ಳಬೇಕೆಂದು ಹೋಗಿದ್ದೆವು. ನಾವು ಹೋದಾಗ ನಮ್ಮ ಹೊಲ ನಮಗೆ ಆಗುವುದಿಲ್ಲ ಎಂದು ಹೇಳಿದ್ದರು. ಏಕೆಂದರೆ 4 ಜನರು ಅವರ ಹೆಸರಿಗೆ ಮಾಡಿಸಿಕೊಂಡಿದ್ದರು. ನಂತರ 7-8 ವರ್ಷಗಳ ಹಿಂದೆ ಪೋಲಿಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇವೆ. ನಮ್ಮ ಜಮೀನಿನ ಸರ್ವೆ ನಂಬರ್ 12 ಇರುತ್ತದೆ. ಸದರಿ ಸರ್ವೆ ನಂಬರಿನಲ್ಲಿ 16 ಎಕರೆ 7 ಗುಂಟೆ ಜಮೀನು ಇರುತ್ತದೆ.

ಸ.ಸ.ಅ. ರವರು ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ.ಎಂ. ರವರಿಂದ:**

ಜಮೀನಿನ ಸರ್ವೆ ನಂಬರ್ 12 ಇರುತ್ತದೆ ಅದರಲ್ಲಿ 16 ಎಕರೆ 7 ಗುಂಟೆ ಜಮೀನು ಇರುತ್ತದೆ. ಸರ್ವೆ ನಂಬರ್ 12 ರಲ್ಲಿರುವ ಜಮೀನು ನನ್ನ ತಂದೆಯವರಾದ ಬಾಲಪ್ಪ @ ಬಾಲಯ್ಯರವರ ಹೆಸರಿನಲ್ಲಿತ್ತು. ಬಾಲಪ್ಪರವರ ತಂದೆಯ ಹೆಸರು ಹನುಮಗೌಡ @ ಹನುಮಯ್ಯ ಇರುತ್ತದೆ.

ನನ್ನ ತಾತನಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಾತನ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಗೆ ಇಬ್ಬರು ಜನ ಅಣ್ಣ ತಮ್ಮಂದಿರು ಇದ್ದರು. ಅವರ ಹೆಸರುಗಳು ಶಿವರಾಯ ಮತ್ತು ನನ್ನ ತಂದೆ ಬಾಲಪ್ಪ ಇರುತ್ತವೆ. ಶಿವರಾಯನಿಗೆ ಒಬ್ಬ ಮಗ ಇರುತ್ತಾನೆ. ಆತನ ಹೆಸರು ತಿಮ್ಮಣ್ಣ

ಇರುತ್ತದೆ. ಸರ್ವೆ ನಂಬರ್ 12 ರಲ್ಲಿರುವ ಜಮೀನು ನನ್ನ ತಂದೆಗೆ ಅವರ ತಂದೆಯ ಕಡೆಯಿಂದ ಬಂದಿತ್ತು. ಸರ್ವೆ ನಂಬರ್ 12 ರಲ್ಲಿ ಶಿವರಾಯನಿಗೆ ಎಷ್ಟು ಭಾಗ ಇತ್ತು ಎಂದರೆ ಸಾಕ್ಷಿಯು ಆತನಿಗೆ ಭಾಗ ಇರಲಿಲ್ಲ ಆತನು ಬಿಜಾಸಪುರ ಗ್ರಾಮಕ್ಕೆ ಹೋಗಿದ್ದನು.

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಜೆ.ಎಂ.ಎಫ್.ಸಿ., ದೇವದುರ್ಗ**